65	ಸಿ.ಕೆ. ಲೀಲ	"
66	ಬಿ.ಆರ್. ತಾರಾ	"
67	ಎಂ. ಶೋಭಾ	ಕ್ಲರ್ಕ್ ಕಂ ಡಿಇಒ
68	ಸುರೇಶ್ ಕುಮಾರ್	" " "
69	ಎಂ.ಜಿ. ಗುರುಪ್ರಸಾದ್	" " "
70	ಚಂದ್ರಿಕಾ ಮೂರ್ತಿ	" " "
71	ಹೆಚ್.ಎನ್. ಶೈಲಜ	" " "
72	ಅನುರಾಧ ಸುಬ್ರಮಣ್ಯ	" " " ಪ್ರೊಬೆಷನರಿ
73	ಆರ್. ಸರಸ್ವತಿ	ಕ್ಲರ್ಕ್ ಕಂ ಡಿಇಎಂ
74	ಎಸ್. ರುದಾ	ಸ್ಟೆನೋಟೈಪಿಸ್ಟ್
75	ಎಸ್.ರವಿ	"
76	ಎನ್.ಶಿವನಂಜಯ್ಯ	ಮಿಡಲ್‌ಸ್ಕೂ ಅಟೆಂಡರ್
77	ಮರಿಲಿಂಗಯ್ಯ	"
78	ಕೆ. ಶಿವಲಿಂಗಯ್ಯ	"
79	ವೈ.ಆರ್. ಸೂರ್ಯನಾರಾಯಣ	"
80	ಹೆಚ್.ಎಂ. ಶಿವಲಿಂಗಯ್ಯ	"
81	ಜಿ. ಪೆರುಮಾಳ್	ವಾಚ್‌ಮ್ಯನ್
82	ಸಿ. ಯೋಗಾನಂದ	ಅಟೆಂಡರ್
83	ಎನ್. ನಾಗರಾಜ	ಅಟೆಂಡರ್
84	ಎಸ್.ಎನ್. ರಾಮಣ್ಣ	ಅಟೆಂಡರ್
85	ಹೆಚ್.ವಿ. ಲಕ್ಷ್ಮಣ	ಸೆಕ್ಯೂರಿಟಿಗಾರ್ಡ್
86	ಬಿ.ಎಸ್. ನರಸಿಂಹಮೂರ್ತಿ	"
87	ಸಿ. ಶ್ರೀನಿವಾಸ	"
88	ವೈ.ಎನ್. ನರಹರಿ	"
89	ಎಂ.ವಿ. ರಮೇಶ	ಅಟೆಂಡರ್
90	ಡಿ.ಎನ್. ರಾಮೇಗೌಡ	"
91	ಎಲ್. ಅಣ್ಣೇಗೌಡ	"
92	ಎಂ.ಸಿ. ನರಸಿಂಹನ್	"
93	ವಿ. ಲಕ್ಷ್ಮಣರಾವ್	ಅಟೆಂಡರ್
94	ಎಸ್. ಸೂರ್ಯನಾರಾಯಣರಾಜು	"
95	ಹೆಚ್. ಯಶೋದ	"

ಆರ್ಥಿಕ ಮುಗ್ಗಟ್ಟಿನಿಂದ ಅಭಿವೃದ್ಧಿಯಾಗದೇ ಇರುವ ಧಾರವಾಡ ಕೃಷಿ ವಿಶ್ವವಿದ್ಯಾಲಯ

128- ಶ್ರೀ ಶಿವಾನಂದ.ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆರ್ಥಿಕ ಮುಗ್ಗಟ್ಟಿನಿಂದ ಧಾರವಾಡ ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿ ಹೊಂದದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

ಅ) ಹಾಗಿದ್ದಲ್ಲಿ ಸರ್ಕಾರದವರು ಆ ವಿಶ್ವ ವಿದ್ಯಾಲಯವನ್ನು ಅಭಿವೃದ್ಧಿ ಪಡಿಸಲು ಹಾಗೂ ಆರ್ಥಿಕವಾಗಿ ಸ್ವಾವಲಂಬನೆಯಾಗಿ ಮಾಡಲು ಯಾವ ಕ್ರಮ ಕೈಗೊಂಡಿದೆ.

ಇ) ಆ ವಿಶ್ವವಿದ್ಯಾನಿಲಯವು ಆರ್ಥಿಕವಾಗಿ ಸ್ವಾವಲಂಬನೆಯಾಗಲು ಇನ್ನು ಎಷ್ಟು ಹಣ ಬೇಕಾಗಿದೆ ಮತ್ತು ಸರ್ಕಾರದವರು ಎಷ್ಟು ಹಣವನ್ನು ಒದಗಿಸಲು ಕ್ರಮ ಕೈಗೊಂಡಿರುವುದು?

ಶ್ರೀ ಎನ್.ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಇಲ್ಲ.

ಆ) ಇ) ಉದ್ಭವಿಸುವುದಿಲ್ಲ.

ತೋಟಗಾರಿಕೆ ಬೆಳೆಯನ್ನು ಮಾಡಲು ಹೆಚ್ಚಿನ ಸಹಾಯ.

126-ಶ್ರೀ ಶಿವಾನಂದ.ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಮಹಾರಾಷ್ಟ್ರದಲ್ಲಿ ತೋಟಗಾರಿಕೆ ಬೆಳೆಗೆ ರಾಜ್ಯ ಸರ್ಕಾರದವರು ಹೆಚ್ಚಿನ ಸಹಾಯವನ್ನು ನೀಡುತ್ತಿರುವಂತೆ ಕರ್ನಾಟಕದಲ್ಲೂ ಸಹ ತೋಟಗಾರಿಕೆ ಇಲಾಖೆಯವರು ತೋಟಗಾರಿಕೆ ಪೀಕನ್ನು ಹಾಗೂ ಹಣ್ಣಿನ ಗಿಡಗಳನ್ನು ಬೆಳೆಸಲು ಕ್ರಮಕೈಗೊಳ್ಳುವರೇ?

ಆ) ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆ ಪೀಕನ್ನು ಹಾಗೂ ಹಣ್ಣಿನ ಪೀಕನ್ನು ಬೆಳೆಸಲು ಸರ್ಕಾರದವರು ಯಾವ ಯಾವ ಸವಲತ್ತುಗಳನ್ನು ಕೊಡುತ್ತಾ ಇರುವರು.

ಇ) ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯವರು ಹಣ್ಣಿನ ಹಾಗೂ ತೋಟಗಾರಿಕೆ ಪೀಕನ್ನು ಬೆಳೆಯಲು ಯಾವ ಯಾವ ಸವಲತ್ತುಗಳನ್ನು ಎಲ್ಲಿ ಎಲ್ಲಿ ಕೊಟ್ಟಿರುವರು? (ವಿವರವಾಗಿ ಕೊಡಬೇಕು)

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) ಮಹಾರಾಷ್ಟ್ರ ತೋಟಗಾರಿಕೆ ಬೆಳೆಗೆ ಆ ರಾಜ್ಯ ಸರ್ಕಾರವು ಸಹಾಯವನ್ನು ನೀಡುತ್ತಿರುವಂಥಹ ಯೋಜನೆಯು ನಮ್ಮ ರಾಜ್ಯದಲ್ಲಿ ಅನುಷ್ಟಾನದಲ್ಲಿಲ್ಲ. ಆದರೆ ಇಂಥಹುದೇ ಒಂದು ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಮುಂದಿನ 1994-95ನೇ ಸಾಲಿನಲ್ಲಿ ರೂ.50.00 ಲಕ್ಷದ ಅನುದಾನದೊಂದಿಗೆ ಯೋಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಬೀಳು ಭೂಮಿಯನ್ನು ಹೊಂದಿರುವಂತಹ ರೈತರ ಜಮೀನಿನಲ್ಲಿ ತೋಟಗಾರಿಕೆ ಬೆಳೆ ಅಭಿವೃದ್ಧಿಗಾಗಿ 3 ವರ್ಷಗಳ ಕಾಲ ಅನುಕೂಲತೆಗಳನ್ನು ಒದಗಿಸುವುದಕ್ಕೆ ಯೋಚಿಸಲಾಗಿದೆ.

ಆ) ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆ ಹಾಗೂ ಹಣ್ಣಿನ ಪೀಕಿನ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇಂಥಹ ಯೋಜನೆಗಳಲ್ಲಿ ಪ್ರಮುಖವಾದಂಥಹವುಗಳ ಹೆಸರು ಮತ್ತು ಅವುಗಳಡಿಯಲ್ಲಿ ರೈತರಿಗೆ ದೊರಕುತ್ತಿರುವ ಸವಲತ್ತುಗಳು ಈ ಕೆಳಕಂಡಂತಿವೆ.

1. ಸಸ್ಯೋತ್ಪಾದನಾ ಕಾರ್ಯಕ್ರಮದಡಿಯಲ್ಲಿ ಇಲಾಖೆಯ 397 ಫಾರಂ ಮತ್ತು ನರ್ಸರಿಗಳಲ್ಲಿ ಉತ್ಕೃಷ್ಟ ದರ್ಜೆಯ ಕಸಿ:ಸಸಿಗಳನ್ನು ಉತ್ಪಾದಿಸಿ, ರೈತರಿಗೆ ಯೋಗ್ಯ ಬೆಲೆಗೆ ಮಾರಾಟ ಮಾಡಲಾಗುತ್ತಿದೆ.